# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ 03 ದಿನಾಂಕ: 05.04.2018

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 13.03.2018 ಮಂಗಳವಾರ ಪೂರ್ವಾಹ್ನ 11.00 ಘಂಟೆಗೆ ಶ್ರೀಯುತ ರಾಮಚಂದ್ರ.ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರುರವರ ಅಧ್ಯಕ್ಷತೆಯಲ್ಲಿ ಸೋಮವಾರಪೇಟೆ ಉಪವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿ.

**ಉಪಸ್ಥಿತರಿದ್ದ ಅಧಿಕಾರಿಗಳು:-**

1. ಶ್ರೀಯುತ ರಾಮಚಂದ್ರ.ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರು.
2. ಶ್ರೀಮತಿ ತಾರಾ.ಎನ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರು.
3. ಶ್ರೀ.ಪಿ.ಎನ್.ದೇವಯ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾ)ಸೆಸ್ಕ್ ವಿಭಾಗ ಕಛೇರಿ ಮಡಿಕೇರಿ.
4. ಶ್ರೀ.ವಿ.ಎಂ.ನಾಗರಾಜು ಲೆಕ್ಕಾಧಿಕಾರಿಯವರು ಮಡಿಕೇರಿ.
5. ಶ್ರೀಮತಿ ಅಲ್ಫೋನ್ಸಾ.ಪಿ.ಜೆ ಲೆಕ್ಕಾಧಿಕಾರಿ ಆಂತರಿಕ ಪರಿಶೋಧಕರು ಮಡಿಕೇರಿ ವಿಭಾಗ.
6. ಶ್ರೀ.ಬಿ.ದಯಾನಂದ ಸಹಾಯಕ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
7. ಶ್ರೀ.ಹೇಮಂತ್ ಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶನಿವಾರಸಂತೆ.
8. ಶ್ರೀ. ರುಕ್ಮಾಂಗದ ಕುಮಾರ್, ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶಾಂತಳ್ಳಿ.
9. ಶ್ರೀ.ರಂಗಸ್ವಾಮಿ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಆಲೂರು ಸಿದ್ದಾಪುರ.
10. ಶ್ರೀ.ಮನುಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕೊಡ್ಲಿಪೇಟೆ.
11. ಶ್ರೀ.ಎಂ.ಸಿ.ಗಿರಿ ಹಿರಿಯ ಸಹಾಯಕ ಚಾ.ವಿ.ಸ.ನಿ.ನಿ ಸೋಮವಾರಪೇಟೆ.
12. ಶ್ರೀ.ಬಿ.ಎಸ್.ದೀಪಕ್ ಹಿರಿಯ ಸಹಾಯಕ ಚಾ.ವಿ.ಸ.ನಿ.ನಿ ಶನಿವಾರಸಂತೆ.

ಚಾ.ವಿ.ಸ.ನಿ.ನಿ. ನಿಗಮ ಕಾರ್ಯಾಲಯ ... ಮೈಸೂರು
ನಂ. 154
ತಾ. 9/4/18

**ಸೋಮವಾರಪೇಟೆ ಉಪವಿಭಾಗದಲ್ಲಿ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ**

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ದುದ್ದಯ್ಯ.ಬಿ.ಎಂ ತಲ್ತಾರೆ ಶೆಟ್ಟಳ್ಳಿ | ತಲ್ತಾರೆ ಶೆಟ್ಟಳ್ಳಿಯಲ್ಲಿರುವ ಟಿ.ಸಿಯ ಕಂಬಗಳು ಶಿಥಿಲಗೊಂಡಿದ್ದು ಬರೀ ಗೈ ವೈರ್‌ನ ಸಹಾಯದಿಂದ ನಿಂತಿದ್ದು, ತುಂಬಾ ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ತಿಳಿಸಿದರು. | ಪರಿಷ್ಕೃತ ಅಂದಾಜು ಪಟ್ಟಿಯನ್ನು ವಿಭಾಗ ಕಛೇರಿಗೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. |
| 2 | ಬಸವರಾಜು.ಬಿ.ಎನ್ ಬೇಳೂರು ಗ್ರಾಮ | ಟಿ.ಸಿ ತೋಟದೊಳಗೆ ಇರುವುದನ್ನು ರಸ್ತೆ ಬದಿಗೆ ಶಿಫ್ಟ್ ಮಾಡಿಕೊಡಬೇಕು. ಫ್ಯೂಸ್ ಹೋದರೆ ಆನೆಗಳ ಕಾಟ ಇರುವುದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಕೇಳಿಕೊಂಡರು. | ಅಂದಾಜು ಪಟ್ಟಿಯನ್ನು ವಿಭಾಗ ಕಛೇರಿಗೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. |

DGM (Council) 9/4

AGM-RAY 10/4

ಸಭೆಯಲ್ಲಿ ಸೋಮವಾರಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು:-

| ಕ್ರಮ ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1. | ಪ್ರಶಾಂತ್<br>ಬಜೆಗುಂಡಿ | ಹಿಂದಿನ ಸಭೆಯಲ್ಲಿ ಬಜೆಗುಂಡಿಯಲ್ಲಿ 11 ಕಂಬಗಳು ಬರೆ ಕುಸಿದು ಅಪಾಯಕಾರಿ ಸ್ಥಿತಿಯಲ್ಲಿದ್ದು, ಸದರಿ ಕಾಮಗಾರಿಯ ಬಗ್ಗೆ ಕೇಳಿದರು. | ಸಾರ್ವಜನಿಕರಿಂದ ಅರ್ಜಿಗಳನ್ನು ತೆಗೆದುಕೊಂಡು ಅಂದಾಜುಪಟ್ಟಿಯನ್ನು ತಯಾರಿಸಿ ಇಲಾಖಾ ವತಿಯಿಂದಲೇ ಕೆಲಸ ಮಾಡಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 2. | ಸುದೀಪ್.ಬಿ.ಎಸ್<br>ಶಿವಾಜಿ ರೋಡ್<br>ಸೋಮವಾರಪೇಟೆ | 1)ತಮ್ಮ ಮನೆಯ ಬಳಿ ವಿದ್ಯುತ್ ತಂತಿಗಳು ಕೆಳಗೆ ಇದ್ದು ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ದೂರಿದರು.<br><br>2)IPDS ಯೋಜನೆಯವರು ತಮ್ಮ ಮನೆಯ ಬಳಿಯೇ ಕಂಬ ಹಾಕಲು ಗುಂಡಿ ತೆಗೆದು ಮುಚ್ಚಿಲ್ಲವೆಂದು ದೂರಿದರು. | 1)ತುರ್ತಾಗಿ ಸ್ಥಳ ಪರಿಶೀಲಿಸಿ ಸರಿ ಪಡಿಸುವಂತೆ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.<br>2)IPDS ಮ್ಯಾನೇಜರ್‌ರವರಿಗೆ ತುರ್ತಾಗಿ ಸರಿಪಡಿಸಲು ತಿಳಿಸಿದರು ಹಾಗೂ ಕಾಮಗಾರಿಯನ್ನು ನಡೆಸುವ ಸಂಧರ್ಭದಲ್ಲಿ ಮಾತ್ರ ಗುಂಡಿ ತೆಗೆಯಲು ತಿಳಿಸಿ ಕಾಮಗಾರಿಯನ್ನು ಬೇಗನೇ ಮುಗಿಸುವಂತೆ ಸೂಚಿಸಿದರು. |
| 3. | ಅಧ್ಯಕ್ಷರು<br>ದೊಡ್ಡಮಳ್ತೆ ಗ್ರಾಮ | ದೊಡ್ಡಮಳ್ತೆ ಗ್ರಾಮದಲ್ಲಿ ಟಿ.ಸಿ ಓವರ್ ಲೋಡ್ ಆಗಿದ್ದು ವೋಲ್ಟೇಜ್ ಸಮಸ್ಯೆ ಇರುವುದರಿಂದ ಆದಷ್ಟು ಬೇಗ UNIP ಟಿ.ಸಿಯನ್ನು ಚಾರ್ಜ್ ಮಾಡುವಂತೆ ಕೇಳಿಕೊಂಡರು. | ತುರ್ತಾಗಿ ಎಲ್ಲ UNIP ಟಿ.ಸಿಯನ್ನು ಚಾರ್ಜ್ ಮಾಡುವಂತೆ ಅಧೀಕ್ಷಕ ಇಂಜಿನಿಯರ್ (ವಿ)ರವರು ಸೂಚಿಸಿದರು. |
| 4. | ಮುರುಳಿ<br>ಕಾನ್ವೆಂಟ್‌ಬಾಣೆ<br>ಚೌಡ್ಲು ಗ್ರಾಮ | ತಮ್ಮ ಮನೆಯ ಪಕ್ಕದಲ್ಲಿಯೇ ಒಂದು ವಿದ್ಯುತ್ ಕಂಬವು ತುಂಬಾ ಶಿಥಿಲಾವಸ್ಥೆಯಲ್ಲಿರುವುದರಿಂದ ಸದರಿ ಕಂಬವನ್ನು ಪಕ್ಕಕ್ಕೆ ಸ್ಥಳಾಂತರಿಸುವಂತೆ ಕೇಳಿಕೊಂಡರು. | ತುರ್ತಾಗಿ ಸ್ಥಳ ಪರಿಶೀಲಿಸಿ ಕಂಬ ಬದಲಾಯಿಸಲು ಶಾಖಾಧಿಕಾರಿಯವರಿಗೆ ಅಧೀಕ್ಷಕ ಇಂಜಿನಿಯರ್ (ವಿ) ರವರು ಸೂಚಿಸಿದರು. |
| 5. | ಲಕ್ಷ್ಮಣ<br>ಗರಗಂದೂರು ಗ್ರಾಮ | ತಮ್ಮ ಗ್ರಾಮದ ಟಿ.ಸಿಯಲ್ಲಿ 20ಕ್ಕೂ ಹೆಚ್ಚು ಐ.ಪಿ ಸೆಟ್‌ಗಳು ಇರುವುದರಿಂದ ಟಿ.ಸಿ ಓವರ್ ಲೋಡ್ ಆಗಿದ್ದು ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೇಳಿಕೊಂಡರು. | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಸೂಚಿಸಿದರು. ಮತ್ತು ಅಕ್ರಮ ಐ.ಪಿ ಸೆಟ್‌ಗಳ ವಿದ್ಯುತ್ ಕಡಿತಗೊಳಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 6. | ಪ್ರಹ್ಲಾದ್<br>ಬೇಳೂರುಬಸವನಳ್ಳಿ ಗ್ರಾಮ | ತಮ್ಮ ಗ್ರಾಮದ ಟಿ.ಸಿಯಲ್ಲಿ ಹೆಚ್ಚು ಐ.ಪಿ ಸೆಟ್‌ಗಳು ಇರುವುದರಿಂದ ಟಿ.ಸಿ ಓವರ್ ಲೋಡ್ ಆಗಿದ್ದು ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೇಳಿಕೊಂಡರು. | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಸೂಚಿಸಿದರು. ಮತ್ತು ಅಕ್ರಮ ಐ.ಪಿ ಸೆಟ್‌ಗಳನ್ನು ಕಡಿತಗೊಳಸಲು ಸೂಚಿಸಿದರು. |
| 7. | ಸುಭಾಷ್<br>ಹಿರಿಕಾರಗ್ರಾಮ | ತಮ್ಮ ತೋಟದೊಳಗೆ ಲೈನ್ ಹೋಗಿದ್ದು, ಅನೇಕ ಬಾರಿ ತಂತಿ ತುಂಡಾಗುತ್ತಿದ್ದು, ಆನೆಗಳು ತಿರುಗಾಡುವ ಸ್ಥಳವಾದ್ದರಿಂದ ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು. | ಎಲಿಫೆಂಟ್ ಕಾರಿಡಾರ್ ಯೋಜನೆಯಲ್ಲಿ ಕೆಲಸ ಮಾಡಿಸಿಕೊಳ್ಳಲು ಸೂಚಿಸಿದರು. |
| 8. | ದಿ.ಚಂದ್ರರವರ ಪತ್ನಿ<br>ಬೆಳ್ಳಾರಳ್ಳಿ ಗ್ರಾಮ | ವಿದ್ಯುತ್ ಅಪಘಾತದಲ್ಲಿ ದಿನಾಂಕ 03.10.2017ರಂದು ತಮ್ಮ ಪತಿಯು ಮೃತ ಪಟ್ಟಿರುತ್ತಾರೆ ಆದರೆ ಇನ್ನೂ ಪರಿಹಾರ ನೀಡದಿರುವ ಬಗ್ಗೆ ಕೇಳಿಕೊಂಡರು. | ಪರಿಶೀಲಿಸಿ ಪರಿಹಾರವನ್ನು ಒದಗಿಸುವುದಾಗಿ ಅಧೀಕ್ಷಕ ಇಂಜಿನಿಯರ್(ವಿ)ರವರು ತಿಳಿಸಿದರು. |
| 9. | ವಿನುಕುಮಾರ್<br>ಕಿಕ್ಕರಳ್ಳಿ ಗ್ರಾಮಸ್ಥರು | ತಮ್ಮ ಗ್ರಾಮದ 10 ಮನೆಗಳಿಗೆ ವಿದ್ಯುತ್ ಸಂಪರ್ಕವೇ ಇರುವುದಿಲ್ಲವಾದ್ದರಿಂದ | ಸೌಭಾಗ್ಯ ಯೋಜನೆಯಡಿಯಲ್ಲಿ ಅರ್ಜಿ ನೋಂದಣಿ ಮಾಡಿಸಿ ವಿದ್ಯುತ್ ಸಂಪರ್ಕವನ್ನು |

| | | | |
|---|---|---|---|
| | | ಹೊಸದಾಗಿ ಲೈನ್ ಹಾಕಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವಂತೆ ಕೋರಿಕೊಂಡರು. | ತೆಗೆದುಕೊಳ್ಳುವಂತೆ ಸೂಚಿಸಲಾಯಿತು. |
| 10. | ಧರ್ಮಪ್ಪ<br>ಕಿಬ್ಬೆಟ್ಟ ಗ್ರಾಮಸ್ಥರು | 1)ವಾಟರ್ ಸಪ್ಪೈ ಟಿ.ಸಿಯನ್ನು ಅಳವಡಿಸಿರುವುದಿಲ್ಲ ಆದ್ದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.<br>2)ಸೋಮವಾರಪೇಟೆಯಲ್ಲಿ IPDS ವರ್ಕ್ ಆಗುತ್ತಿರುವುದಿಲ್ಲ ಕೇವಲ 2-3 ದಿನ ಕೆಲಸ ಮಾಡಿ ನಿಲ್ಲಿಸಲಾಗಿದೆ ಎಂದು ದೂರಿದರು.<br>3)ನೂತನ 66/11 ಕೆ.ವಿ ಸ್ಟೇಷನ್‌ನ ನಿರ್ಮಾಣ ಕಾಮಗಾರಿಯು ಸ್ಥಗಿತಗೊಂಡಿದ್ದು, ಆದಷ್ಟು ಬೇಗ ಜಾಗದ ಸಮಸ್ಯೆಯನ್ನು ಇತ್ಯರ್ಥಗೊಳಿಸಿ ಅಥವಾ ಬದಲಿ ಜಾಗದ ವ್ಯವಸ್ಥೆ ಮಾಡಿ ತುರ್ತಾಗಿ ಸ್ಟೇಷನ್ ನಿರ್ಮಾಣ ಮಾಡಲು ಸೂಚಿಸಿದರು. | 1)ಮಂಜೂರಾದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.<br>2)IPDS ಮ್ಯಾನೇಜರ್‌ರವರಿಗೆ ತುರ್ತಾಗಿ ಕಾಮಗಾರಿಯನ್ನು ಪ್ರಾರಂಭಿಸಲು ಅಧೀಕ್ಷಕ ಇಂಜಿನಿಯರ್(ವಿ)ರವರು ಸೂಚಿಸಿದರು.<br>3) ಪ್ರೋಸೆಸಿಂಗ್ ಆಗುತ್ತಿದ್ದು ಜಾಗದ ಸರ್ವೆ ನಂ. ಸಮಸ್ಯೆಯಿಂದ ತಡವಾಗುತ್ತಿದೆ ಎಂದು ತಿಳಿಸಿದರು. |
| 11. | ಭೋಜರಾಜು<br>ಹಾರೆಹೊಸೂರು ಗ್ರಾಮ | ಅಕ್ರಮ ಐ.ಪಿ ಸೆಟ್‌ಗಳ ವಿದ್ಯುತ್‌ನ್ನು ಕಡಿತಗೊಳಿಸಿರುವುದರಿಂದ ವ್ಯವಸಾಯಕ್ಕೆ ನೀರಿಲ್ಲದ ಕಾರಣ ಸಕ್ರಮಗೊಳಿಸಲು ತಾತ್ಕಾಲಿಕವಾಗಿ ಸಮಯ ನೀಡುವಂತೆ ಕೇಳಿಕೊಳ್ಳಲಾಯಿತು. | ಅಕ್ರಮ ಐ.ಪಿ ಸೆಟ್‌ಗಳ ವಿದ್ಯುತ್ ಕಡಿತಗೊಳಿಸಿ ಹಣ ಪಾವತಿಸಿಕೊಂಡು ಸಕ್ರಮಗೊಳಿಸಿಕೊಳ್ಳಲು ಸೂಚಿಸಲಾಯಿತು. |
| 12. | ಎನ್.ಪಿ.ಜನಾರ್ಧನ್<br>ವಳಗುಂದ ಗ್ರಾಮಸ್ಥರು | ತಮ್ಮ ಗ್ರಾಮದಲ್ಲಿ ವ್ಯವಸಾಯಕ್ಕೆ ನೀರಿನ ಅನಾನುಕೂಲತೆ ಇರುವುದರಿಂದ ನಮಗೆ ನೀರಿನ ಸಂಪರ್ಕ ಪಡೆಯಲು ಹೆಚ್ಚುವರಿ ಪರಿವರ್ತಕದ ಅವಶ್ಯಕತೆಯಿದೆ ಎಂದು ಕೋರಿದರು. | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 13. | ಯತೀಶ್<br>ನೇಗಳ್ಳೆ ಕರ್ಕಳ್ಳಿ ಗ್ರಾಮಸ್ಥರು | ತಮ್ಮ ಗ್ರಾಮಕ್ಕೆ ಹೆಚ್ಚುವರಿ ಟಿ.ಸಿಯ ಅವಶ್ಯಕತೆ ಇರುತ್ತದೆ ಮತ್ತು ವಿದ್ಯುತ್ ಕಂಬಗಳ ತಂತಿಗಳು ತುಂಬಾ ಕೆಳಗೆ ಇರುವುದರಿಂದ ಮಧ್ಯಂತರ ಕಂಬಗಳ ಅಳವಡಿಸಬೇಕೆಂದು ಕೋರಿಕೊಂಡರು. | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಮತ್ತು ಮಧ್ಯಂತರ ಕಂಬಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 14. | ಪ್ರಭುದೇವ್.ಜಿ.ಎಸ್<br>ಬೇಳೂರು ಬಸವನಳ್ಳಿ ಗ್ರಾಮ | ತಮ್ಮ 10 ಹೆಚ್.ಪಿ ನೀರಾವರಿ ಪಂಪ್‌ಸೆಟ್ಟಿಗೆ ವಿದ್ಯುತ್ ಸಂಪರ್ಕವನ್ನು ಇಲಾಖಾವತಿಯಿಂದ ಕಲ್ಪಿಸುವಂತೆ ಕೇಳಿಕೊಂಡರು. | ಶೀಘ್ರ ವಿದ್ಯುತ್ ಯೋಜನೆಯಲ್ಲಿ ಪರಿವರ್ತಕವನ್ನು ಅಳವಡಿಸಿಕೊಳ್ಳುವಂತೆ ತಿಳಿಸಲಾಯಿತು. |
| 15. | ಶಿವಪ್ಪ<br>ಹಾನಗಲ್ ಗ್ರಾಮ | 1)ಸುಟ್ಟು ಹೋಗಿರುವ ಟಿ.ಸಿಯನ್ನು ಬದಲಾಯಿಸುವಂತೆ ತಿಳಿಸಿದರು<br>2)ವಾಟರ್ ಸಪ್ಪೈಗೆ ಪ್ರತ್ಯೇಕ ಟಿ.ಸಿಯನ್ನು ಅಳವಡಿಸಿ ಕೊಡಬೇಕಾಗಿ ಕೇಳಿಕೊಂಡರು. | 1)ತುರ್ತಾಗಿ ಸುಟ್ಟು ಹೋಗಿರುವ ಟಿ.ಸಿಯನ್ನು ಬದಲಿಸುವಂತೆ ಸೂಚಿಸಲಾಯಿತು.<br>2)ಕುಡಿಯುವ ನೀರು ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 16. | ವಿಜಯೇಂದ್ರ<br>ಗರಗಂದೂರು ಗ್ರಾಮ | 1)ಕೊಡಗಿನಲ್ಲಿ ಕಾಫಿ ತೋಟದೊಳಗೆ ಇರುವ ಲೈನ್‌ನ್ನು ರಸ್ತೆ ಬದಿಗೆ ಹಾಕುವಂತೆ ಕೇಳಿಕೊಂಡರು.<br>2)ಗರಗಂದೂರಿನಲ್ಲಿ ಸುಟ್ಟು ಹೋಗಿರುವ ಟಿ.ಸಿಯನ್ನು ಬದಲಾಯಿಸಿ ಮತ್ತು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿ ಕೊಡಬೇಕಾಗಿ ಕೇಳಿಕೊಂಡರು.<br>3)ತಮ್ಮ ತೋಟದಲ್ಲಿರುವ ಟಿ.ಸಿಯಿಂದ 3 ಹಸುಗಳು ಮರಣ ಹೊಂದಿದ್ದು ಮತ್ತು | 1)ಕೊಡಗಿನಲ್ಲಿ ಲೈನ್ ಹೆಚ್ಚಿನ ಪ್ರಮಾಣದಲ್ಲಿ ಕಾಫಿ ತೋಟದೊಳಗೆ ಇರುವ ಕಾರಣ ರಸ್ತೆ ಬದಿಗೆ ಹಾಕಲು ಸಾಧ್ಯವಿಲ್ಲವೆಂದು ಸೂಚಿಸಿದರು.<br>2)ತುರ್ತಾಗಿ ಸುಟ್ಟ ಟಿ.ಸಿಯನ್ನು ಬದಲಿಸಿ ಹೆಚ್ಚುವರಿ ಟಿ.ಸಿಯನ್ನು ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.<br>3)ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ |

| | | | |
|---|---|---|---|
| | | ತೋಟವು ಬೆಂಕಿ ಹತ್ತಿ ಸುಟ್ಟು ಹೋಗಿರುವುದರಿಂದ ಟಿ.ಸಿಯನ್ನು ತೋಟದಿಂದ ರಸ್ತೆ ಬದಿಗೆ ಸ್ಥಳಾಂತರಿಸಬೇಕೆಂದು ಕೇಳಿಕೊಂಡರು. | ಪರಿವರ್ತಕವನ್ನು ಸ್ಥಳಾಂತರಿಸಿಕೊಳ್ಳುವಂತೆ ಸೂಚಿಸಿದರು. |
| 17. | ರವೀಶ್.ಹೆಚ್.ಪಿ<br>ಪಿ.ಡಿ.ಓ ಹಾನಗಲ್ಲು ಪಂಚಾಯ್ತಿ | ಕಲ್ಕಂದೂರು ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಮೂರು ಮೋಟಾರಿನ ವಿದ್ಯುತ್ ಸ್ಥಾವರಗಳಿಗೆ ಪ್ರತ್ಯೇಕ ಟಿ.ಸಿಯನ್ನು ಅಳವಡಿಸಿಕೊಡಬೇಕಾಗಿ ಕೇಳಿಕೊಂಡರು. | ಕುಡಿಯುವ ನೀರಿಗೆ ಪ್ರತ್ಯೇಕ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 18. | ಗಣೇಶ್<br>ಹಣಕೋಡು ಗ್ರಾಮ | ತಮ್ಮ ತೋಟದೊಳಗೆ ಇರುವ ಲೈನ್ ಶಿಫ್ಟ್ ಮಾಡಿಕೊಡಲು ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಲೈನ್ ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 19. | ಪ್ರಕಾಶ್ ಬೆಳ್ಳಿಯಪ್ಪ<br>ಯಡವಾರೆ ಗ್ರಾಮ | 1)ಯಡವಾರೆ ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೇಳಿದರು.<br>2)ನಿರಂತರವಾಗಿ ವಿದ್ಯುತ್ ಕಡಿತಗೊಳ್ಳುತ್ತಿರುವ ಬಗ್ಗೆ ದೂರಿದರು. | 1)ಅಂದಾಜುಪಟ್ಟಿಯನ್ನು ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು.<br>2)ಕೊಡಗಿನಲ್ಲಿ ಲೋಡ್‌ಶೆಡ್ಡಿಂಗ್ ಇರುವುದಿಲ್ಲ ಆದಷ್ಟು ವಿದ್ಯುತ್ ಕಡಿತವನ್ನು ತಪ್ಪಿಸಲು ಸೂಚಿಸಲಾಯಿತು. |
| 20. | ಎ.ಬಿ.ಚಂಗಪ್ಪ<br>ಬೇಳೂರು ಬಸವನಳ್ಳಿ ಗ್ರಾಮ | ಕೆ.ಎಸ್.ಸತೀಶ್‌ರವರ ತೋಟದೊಳಗೆ ಇರುವ ಲೈನ್‌ನ್ನು ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಲೈನ್ ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 21. | ನಂದ<br>ಯಡವಾರೆ ಗ್ರಾಮ | ಟಿ.ಸಿಯು ತೋಟದೊಳಗೆ ಇದ್ದು ಟಿ.ಸಿಯಿಂದ ಬೆಂಕಿ ಹತ್ತಿ ತೋಟವು ಸುಟ್ಟು ಹೋಗಿದ್ದು ಟಿ.ಸಿಯನ್ನು ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಪರಿವರ್ತಕವನ್ನು ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 22. | ಅಧ್ಯಕ್ಷರು<br>ಊರುಗುತ್ತಿ ಗ್ರಾಮ | ವಾಟರ್ ಸಪ್ಲೈ ಟಿ.ಸಿ ಓವರ್‌ಲೋಡ್ ಆಗಿದ್ದು ಹೆಚ್ಚುವರಿ ಟಿ.ಸಿಯನ್ನು ಅಳವಡಿಸಿಕೊಡಬೇಕಾಗಿ ಕೇಳಿಕೊಂಡರು. | ವಾಟರ್ ಸಪ್ಲೈ ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 23. | ಪ್ರಮೋದ್<br>ಯಡವಾರೆ ಗ್ರಾಮ | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕವನ್ನು ಕೇಳಿಕೊಂಡರು. | ಅಂದಾಜುಪಟ್ಟಿಯನ್ನು ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 24 | ತಂಗಮ್ಮ ಟೀಚರ್<br>ಹಾನಗಲ್ ಗ್ರಾಮ | ತಮ್ಮ ತೋಟದೊಳಗೆ ಇರುವ ಲೈನ್‌ನ್ನು ರಸ್ತೆ ಬದಿಗೆ ಸ್ಥಳಾಂತರಿಸಿಕೊಡಬೇಕಾಗಿ ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಲೈನ್ ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 25. | ಸುಳಿಮಳ್ತೆ ಗ್ರಾಮಸ್ಥರು | ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕವನ್ನು ಕೇಳಿಕೊಂಡರು. | ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿಯನ್ನು ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 26. | ಹೆಚ್.ಎಂ.ಕೊಮಾರಪ್ಪ<br>ಹಿರಿಕಾರ ಗ್ರಾಮ | ತಮ್ಮ ತೋಟದ ಮಧ್ಯೆ ಹಾದು ಹೋಗಿರುವ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಬೇಕಾಗಿ ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಲೈನ್ ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 27. | ಎಂ.ಬಿ ಜನಾರ್ಧನ್<br>ಯಡವಾರೆ ಗ್ರಾಮ | ತಮ್ಮ ತೋಟದ ಬದಿಯಲ್ಲಿರುವ ಹೈವೋಲ್ಟೇಜ್ ಪರಿವರ್ತಕದಿಂದ ಕಾಫಿ ಗಿಡಗಳು ಸುಟ್ಟು ಹೋಗುತ್ತಿದ್ದು ಮತ್ತು 2 ಬಾರಿ ಟಿ.ಸಿ ಕಂಬಗಳಿಗೆ ವಾಹನ ಅಘಾತ ಕೂಡ ಉಂಟಾಗಿದ್ದು ಪ್ರಾಣ ಹಾನಿಯಾಗುವ ಸಂಭವವಿರುವುದರಿಂದ ಸದರಿ ಟಿ.ಸಿಯನ್ನು ಬೇರಡೆಗೆ ಸ್ಥಳಾಂತರಿಸಬೇಕಾಗಿ ಕೇಳಿಕೊಂಡರು. | ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಟಿ.ಸಿಯನ್ನು ಶಿಫ್ಟ್ ಮಾಡಿಸಿಕೊಳ್ಳಲು ಸೂಚಿಸಲಾಯಿತು. |
| 28 | ಭರತ್<br>ಕಾಜೂರು ಗ್ರಾಮ | ಕಾಜೂರು ದುರ್ಗಾ ರಸ್ತೆಯಲ್ಲಿರುವ ಕುಡಿಯುವ ನೀರಿನ ಪಂಪ್ ವೋಲ್ಟೇಜ್ ಸಮಸ್ಯೆಯಿಂದ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಆದ್ದರಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು. | ಕುಡಿಯುವ ನೀರಿನ ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿಯನ್ನು ಸಲ್ಲಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |

| | | | |
|---|---|---|---|
| 29 | ಗ್ರಾಮಸ್ಥರು ಪರಿಶಿಷ್ಟಜಾತಿ ಕಾಲೋನಿ & ತಮಿಳರ ಕಾಲೋನಿ ದೊಡ್ಡಮಳ್ತೆ | ನಮ್ಮ ಕಾಲೋನಿಗೆ ವೋಲ್ಟೇಜ್ ಸಮಸ್ಯೆ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೇಳಿಕೊಂಡರು. | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು. |

ಅಧೀಕ್ಷಕ ಇಂಜನಿಯರ(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:
1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಸೋಮವಾರಪೇಟೆ ಉಪವಿಭಾಗ ರವರ ಮಾಹಿಗಾಗಿ.